ಪ್ರತಿಯೊಬ್ಬ ವ್ಯಕ್ತಿಯನ್ನೂ, ಆತ ಶಿವನೆಂದೇ ತಿಳಿದು ಸೇವೆ ಮಾಡಬೇಕು ಎಂದು ಉಪದೇಶಿಸಿದ್ದಾರೆ (ಶಿವಜ್ಞಾನೇ ಜೀವಸೇವಾ). ಹೀಗಾಗಿ ರಾಮಕೃಷ್ಣ ಮಿಷನ್ನಿನ ಸಂನ್ಯಾಸಿಗಳು ಕೈಗೊಳ್ಳುವ ಎಲ್ಲ ಬಗೆಯ ಕಾರ್ಯಗಳನ್ನೂ ಭಗವತ್ಸೇವೆ ಯೆಂದೇ ನಾವು ಪರಿಗಣಿಸಬೇಕಾಗುತ್ತದೆ. ಒಮ್ಮೆ ಪೂಜ್ಯ ಸ್ವಾಮಿ ಮಾಧವಾನಂದಜಿ ಮಹಾರಾಜ್ ಅವರು, ನಮ್ಮ ಸಾಧುಗಳು ಕೈಗೊಳ್ಳುವ ಕರ್ಮಯೋಗವು ಭಕ್ತಿಯೋಗದ ವಿಸ್ತಾರರೂಪವಷ್ಟೇ ಎಂಬ ಅಂಶವನ್ನು ಗುರುತುಮಾಡಿ ತೋರಿಸಿದ್ದರು. ಪೂಜ್ಯ ಸ್ವಾಮಿ ಗಂಭೀರಾನಂದಜಿ ಅವರು ಅದನ್ನು 'ಸೇವಾ ಯೋಗ' ಎಂದು ಕರೆದರು. ಹೀಗಾಗಿ ರಾಮಕೃಷ್ಣ ಮಿಷನ್ ಸಂಸ್ಥೆಯನ್ನು ಸಾಮಾಜಿಕ ಸೇವಾ ಸಂಸ್ಥೆಯೆಂದು ಪರಿಗಣಿಸಬಾರದು; ಆಧ್ಯಾತ್ಮಿಕ ಸಂಸ್ಥೆಯೆಂದೇ ಭಾವಿಸಬೇಕು.

೨. ರಾಮಕೃಷ್ಣ ಮಹಾಸಂಘದಲ್ಲಿ ಬಾಹ್ಯ ತಪಾಚರಣೆ ಗಳಿಗಿಂತ, ಸಂನ್ಯಾಸಿಗಳ ಅಂತರಂಗದ ಪರಿಶುದ್ಧತೆಗೇ ಮಹತ್ವ ವನ್ನು ನೀಡಲಾಗುತ್ತದೆ. ನಮ್ಮ ಸಾಧುಗಳಿಗೆ ಕಾವಿ ಬಟ್ಟೆ ಎನ್ನು ವುದು ಅಂತರಂಗದಲ್ಲಿ ಜ್ವಲಿಸುತ್ತಿರುವ ಪವಿತ್ರತೆ ಮತ್ತು ತ್ಯಾಗಗಳ ಸಂಕೇತವಾಗಿದೆ.

೩. ರಾಮಕೃಷ್ಣ ಮಿಷನ್ನಿನ ಸಾಧುಗಳು, ಆಹಾರ, ವಸ್ತ್ರ, ಪ್ರಯಾಣ, ಸಂವಹನ ಮೊದಲಾದವುಗಳಲ್ಲಿ ಆಧುನಿಕ ರೀತಿನೀತಿ ಗಳನ್ನು ಅನುಸರಿಸುತ್ತಾರೆ. ಆದರೆ ಅವರು, ಸಂನ್ಯಾಸಿ ಧರ್ಮದ ನಿಯಮಗಳಾದ ತಪಸ್ಸು, ಪವಿತ್ರತೆ ಮತ್ತು ಸರಳತೆಗಳ ಬಗ್ಗೆ ಯಾವ ಹೊಂದಾಣಿಕೆಯನ್ನೂ ಮಾಡಿಕೊಳ್ಳುವುದಿಲ್ಲ.

**೪. ಪಂಥಾತೀತ ದೃಷ್ಟಿ :** ಶ್ರೀರಾಮಕೃಷ್ಣರನ್ನು ಕುರಿತು ತಾವು ರಚಿಸಿದ ಸುಂದರ ಸ್ತೋತ್ರವೊಂದರಲ್ಲಿ ಸ್ವಾಮಿ ಅಭೇದಾನಂದರು ಹೀಗೆ ಹೇಳುತ್ತಾರೆ: **ಪೂಜಿತಾ ಯೇನ ವೈ ಶಶ್ವತ್ ಸರ್ವೇಽಪಿ ಸಾಂಪ್ರದಾಯಿಕಾಃ । ಸಂಪ್ರದಾಯವಿಹೀನೋ ಯಃ ಸಂಪ್ರದಾಯಂ ನ ನಿಂದತಿ ॥** (ಶ್ರೀರಾಮಕೃಷ್ಣರು ಯಾವುದೇ ಮತ ಅಥವಾ ಪಂಗಡಕ್ಕೆ ಸೇರಿದವರಲ್ಲ. ಆದರೆ ಅವರು ಎಲ್ಲ ಮತಗಳನ್ನೂ ಗೌರವಿಸಿದರು. ಯಾವ ಮತವನ್ನೂ ನಿಂದಿಸಲಿಲ್ಲ.) ಶ್ರೀರಾಮಕೃಷ್ಣರ ಈ ಪಂಥಾತೀತ ದೃಷ್ಟಿಯೇ ರಾಮಕೃಷ್ಣ ಮಹಾಸಂಘದಲ್ಲಿ ಒಂದು ರೀತಿಯ ಸಂಪ್ರದಾಯವಾಗಿಬಿಟ್ಟಿದೆ. ರಾಮಕೃಷ್ಣ ಮಿಷನ್ನಿಗೆ ಸೇರಿದ ಸಂನ್ಯಾಸಿಗಳು ಯಾವುದೇ ಪಂಥಕ್ಕೆ ಸೇರಿದವರಲ್ಲ. ಆದರೆ ಅವರು ವಿವಿಧ ಸಂನ್ಯಾಸಿ ಸಂಪ್ರದಾಯಗಳ ಇತರ ಸಂನ್ಯಾಸಿಗಳೊಡನೆ ಮುಕ್ತವಾಗಿ ಬೆರೆಯುತ್ತಾರೆ.

೫. ರಾಮಕೃಷ್ಣ ಮಹಾಸಂಘದ ಇನ್ನೊಂದು ವೈಶಿಷ್ಟ್ಯ ವೆಂದರೆ, ಯಾವುದೇ ಜಾತಿ, ಧರ್ಮ ಮತ್ತು ಜನಾಂಗಗಳ ಭೇದವಿಲ್ಲದೆ, ಎಲ್ಲರಿಗೂ ತನ್ನ ದ್ವಾರವನ್ನು ತೆರೆದಿಟ್ಟಿರುವುದು.

**೬. ಸಂನ್ಯಾಸಿ ಧರ್ಮದ ಆಧಾರವಾಗಿ ಪರಸ್ಪರ ಪ್ರೀತಿ :** ರಾಮಕೃಷ್ಣ ಮಠದಲ್ಲಿ ಪರಿಪಾಲಿಸುವ ಸಂನ್ಯಾಸಿ ಧರ್ಮದ ಬಹು ಮುಖ್ಯ ವೈಶಿಷ್ಟ್ಯಗಳಲ್ಲಿ ಇದೂ ಒಂದು. ಇದರ ಬಗ್ಗೆ ಹೆಚ್ಚು ಜನರ ಗಮನ ಹರಿದಂತೆ ಕಾಣಿಸುವುದಿಲ್ಲ. ಸಾಂಪ್ರದಾಯಿಕ ಹಿಂದೂ ಸಂನ್ಯಾಸಿ ಮಠಗಳಲ್ಲಿ ಕಂಡುಬರುವ ಸಮೂಹ ಬಾಳುವೆಯ ಆಧಾರವೆಂದರೆ, ಪರಸ್ಪರ ಅವಲಂಬನೆ ಅಥವಾ ಒಬ್ಬ ಗುರುವಿನಲ್ಲಿ ಇಲ್ಲವೇ ಒಂದು ಸಮಾನ ಆದರ್ಶದಲ್ಲಿ ವಿಧೇಯತೆ. ಆದರೆ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳ ಸಮೂಹ ಬಾಳುವೆಯ ಆಧಾರಶಿಲೆಯೆಂದರೆ, ಶ್ರೀರಾಮಕೃಷ್ಣರು ತಮ್ಮ ಶಿಷ್ಯರ ಮೇಲೆ ತೋರಿಸಿದ ಅವ್ಯಾಜ ಪ್ರೇಮ, ಶ್ರೀಮಾತೆ ಶ್ರೀಶಾರದಾದೇವಿಯವರು ಹರಿಸಿದ, ಎಲ್ಲವನ್ನೂ ತಬ್ಬಿಕೊಳ್ಳುವ ಮಾತೃವಾತ್ಸಲ್ಯ ಮತ್ತು ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರುಗಳು ತೋರ್ಪಡಿಸಿದ ಸಹೋದರ ಸ್ನೇಹಭಾವನೆಯ ಪರಂಪರೆ. ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳೆಲ್ಲ ಒಡಹುಟ್ಟಿದವರ ಹಾಗೆ ಒಂದಾಗಿ ಬಾಳುತ್ತಾರೆ. ತಮ್ಮ ಸಹೋದರ ಸಂನ್ಯಾಸಿಗಳಲ್ಲಿ ಅವರು ತೋರುವ ಪ್ರೀತಿಯು ಸಾಧಾರಣ ಮಾನವೀಯ ಬಾಂಧವ್ಯವಲ್ಲ; ಅದು ದಿವ್ಯಪ್ರೇಮ. ಈ ದಿವ್ಯಪ್ರೇಮವು ಎಲ್ಲ ಬಗೆಯ ಮಾನವೀಯ ಸಂಬಂಧಗಳನ್ನೂ ಉದಾತ್ತವಾಗಿಸುತ್ತದೆ; ದಿವ್ಯವಾಗಿಸುತ್ತದೆ. ಶ್ರೀಮಾತೆ ಶಾರದಾದೇವಿಯವರು ಈ ಆಧ್ಯಾತ್ಮಿಕ ಪ್ರೇಮದ ಬೆಳವಣಿಗೆಯಲ್ಲಿ ಹಾಗೂ ಸಂನ್ಯಾಸಿಗಳಲ್ಲಿ ಹಲವಾರು ರೀತಿಯ ವೈವಿಧ್ಯತೆ ಇದ್ದಾಗ್ಯೂ ಅವರನ್ನೆಲ್ಲ ಭ್ರಾತೃತ್ವದ ಬಂಧನದಲ್ಲಿ ಒಟ್ಟುಗೂಡಿಸುವ ಘನ ಕಾರ್ಯದಲ್ಲಿ, ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

**೭. ಸಾಮೂಹಿಕ ಶಿಸ್ತು :** ಪ್ರೀತಿಗಿಂತ ಕಡಮೆಯೇನೂ ಪ್ರಾಮುಖ್ಯವಲ್ಲದ್ದೆಂದರೆ ಶಿಸ್ತು. ಹಾಗೆ ನೋಡಿದರೆ, ರಾಮಕೃಷ್ಣ ಮಹಾಸಂಘದ ಇನ್ನೊಂದು ವೈಶಿಷ್ಟ್ಯ ಅದು ಕಠಿಣವಾದ ವಿಧಿವಿಧಾನಗಳನ್ನು ಹೊಂದಿರುವುದು. ಅದಲ್ಲದೆ, ಸಂನ್ಯಾಸಿಗಳ ವೈಯಕ್ತಿಕ ಜೀವನ ಮತ್ತು ಮಹಾಸಂಘದ ಆಡಳಿತವನ್ನು ನಿರ್ದೇಶಿಸುವ ಹಲವಾರು ಲಿಖಿತ ನಿಯಮಗಳನ್ನೂ ಅದು ಹೊಂದಿದೆ. ಸಂನ್ಯಾಸಿಗಳು ಸ್ವಯಂಪ್ರೇರಿತರಾಗಿ ಈ ಶಿಸ್ತುಬದ್ಧ ನಡವಳಿಕೆಗೆ ಬದ್ಧರಾಗಿರುತ್ತಾರೆ. ಇದು ಮಹಾಸಂಘದ ಪವಿತ್ರತೆ, ಆಧ್ಯಾತ್ಮಿಕ ಶಕ್ತಿ ಮತ್ತು ಕಾರ್ಯದಕ್ಷತೆಗಳನ್ನು ಕಾಪಾಡಿಕೊಂಡು ಬರುವುದಕ್ಕೆ ಸಹಾಯಕಾರಿಯಾದ ಅಂಶ. ಏಕೆಂದರೆ, ರಾಮಕೃಷ್ಣ ಮಹಾಸಂಘವು ಕೆಲವು ವರ್ಷಗಳಷ್ಟೇ ಅಸ್ತಿತ್ವದಲ್ಲಿ ಇರುವಂಥದಲ್ಲ; ಶತಶತಮಾನಗಳ ಕಾಲ ಇರುವಂಥದ್ದು. ಹೀಗಾಗಿ ಶಿಸ್ತಿನ ಅನುಸರಣೆಯು ಅದರ ರಕ್ಷಣೆಗೆ ಮತ್ತು ಕಾಣದ ಭವಿಷ್ಯದಲ್ಲಿ ಅದರ ಮುಂದುವರಿಕೆಗೆ ಅವಶ್ಯವಾಗಿದೆ.

**೮. ಆದರ್ಶರೂಪರಾಗಿ ಶ್ರೀರಾಮಕೃಷ್ಣರು :** ಈ ವರ್ತ ಮಾನ ಯುಗದಲ್ಲಿ ಶ್ರೀರಾಮಕೃಷ್ಣರು ಸಂನ್ಯಾಸಿ ಧರ್ಮದ ಎರಡು ಪರಮಾದರ್ಶಗಳಾದ ಕಾಮ-ಕಾಂಚನ ತ್ಯಾಗ ಮತ್ತು ಮುಕ್ತಿಗೆ ಸಾಧನವಾಗಿ ಭಗವತ್ಸಾಕ್ಷಾತ್ಕಾರ – ಇವುಗಳ ಪರಿಪೂರ್ಣ ಪ್ರತಿರೂಪರಾಗಿದ್ದಾರೆ. ಹಾಗೆಂದೇ ಸ್ವಾಮಿ ವಿವೇಕಾನಂದರು ಈ ಮಹಾಸಂಘದ ಸಂನ್ಯಾಸಿಗಳ ಮುಂದೆ ಶ್ರೀರಾಮಕೃಷ್ಣರ ಜೀವನವನ್ನು ಆದರ್ಶವಾಗಿ ಇರಿಸಿದ್ದಾರೆ. ಶ್ರೀರಾಮಕೃಷ್ಣರ ದಿವ್ಯ ಮಂಗಳ ವಿಗ್ರಹವು ತ್ಯಾಗ, ಪರಿಪೂರ್ಣ ಪವಿತ್ರತೆ ಮತ್ತು ದಿವ್ಯಪ್ರೇಮವನ್ನು ಹೊರಸೂಸುವ ಅತ್ಯಂತ ಸ್ಫೂರ್ತಿದಾಯಕವಾದ ಪ್ರತೀಕವಾಗಿದೆ. ಸಂನ್ಯಾಸಿಗಳಾದವರಿಗೆ ಶ್ರೀರಾಮಕೃಷ್ಣರ ವಿಗ್ರಹವೇ ಪ್ರೇಷಮಂತ್ರವಾಗಿ ಪರಿಣಮಿಸುತ್ತದೆ. ಏಕೆಂದರೆ ಅದು ಮೂರು ಲೋಕಗಳ ಆಕರ್ಷಣೆಗಳನ್ನೂ ಮೀರಿ, ಬದುಕಿನ ಪರಮ

ಧ್ಯೇಯದತ್ತ ಸಾಗಲು ಅವರನ್ನು ಪ್ರೇರೇಪಿಸುತ್ತದೆ. ಶ್ರೀರಾಮಕೃಷ್ಣರ ಮೇಲಿನ ಧ್ಯಾನವು ಮನಸ್ಸನ್ನು ಪರಿಶುದ್ಧಗೊಳಿಸುವುದು; ಎಲ್ಲ ಕಾರ್ಯಗಳನ್ನೂ ಪವಿತ್ರಗೊಳಿಸುವುದು ಮತ್ತು ನಮ್ಮ ಮನೋಭಾವನೆಗಳನ್ನೂ ಮತ್ತು ಸಂಬಂಧಗಳನ್ನೂ ದಿವ್ಯವಾಗಿಸುವುದು. ಇಡೀ ಅಖಂಡ ರಾಮಕೃಷ್ಣ ಮಹಾಸಂಘ ತನ್ನ ಕೇಂದ್ರ ಆಧಾರಸ್ತಂಭವಾಗಿ ಹೊಂದಿರುವುದು ಈ ರಾಮಕೃಷ್ಣ ಆದರ್ಶವನ್ನೇ. ಇದೇ ಇನ್ನಿತರ ಸಂನ್ಯಾಸಿ ಸಂಪ್ರದಾಯಗಳಿಗಿಂತ ಇದನ್ನು ವಿಶಿಷ್ಟವನ್ನಾಗಿ ಮಾಡಿರುವುದು.

ಸ್ವಾಮಿ ವಿವೇಕಾನಂದರು ಹಿಂದೂ ಧರ್ಮಕ್ಕೆ ನೀಡಿರುವ ಬಹುಮುಖ್ಯವಾದ ಕೊಡುಗೆಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದೇನೆ. ವಿಷಾದದ ಸಂಗತಿಯೆಂದರೆ, ಹಿಂದೂಗಳಲ್ಲಿ ಬಹುತೇಕರು, ಹಿಂದೂ ಧರ್ಮಕ್ಕೆ ಸ್ವಾಮೀಜಿ ಕೊಟ್ಟಿರುವ ಕೊಡುಗೆಗಳ ಬಗ್ಗೆ ಅರಿತುಕೊಳ್ಳದಿರುವುದು. ಸ್ವಾಮೀಜಿಯವರ ಈ ಅಮೂಲ್ಯ ಕೊಡುಗೆಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡುವುದು, ಅವುಗಳ ನಿಜವಾದ ಮಹತ್ವವನ್ನು ಅರಿತುಕೊಳ್ಳುವುದು ಮತ್ತು ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಅವುಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದು – ಇವೇ ನಮ್ಮೆಲ್ಲರ ಆದ್ಯ ಕರ್ತವ್ಯ.

## ಸ್ವಾಮಿ ವಿವೇಕಾನಂದರ ಸ್ಫೂರ್ತಿ ಮತ್ತು ಪ್ರಭಾವ – ಅನುಭವ ಕಥನ

### ಮನಸ್ಸಿನ ಹಂಬಲ ಪೂರೈಸಿ, ಆತ್ಮ ಸಂತೋಷ ನೀಡಿದರು !

"ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ರಾಮಕೃಷ್ಣ ಮಹಾಸಂಘದ ಧ್ಯೇಯವಾಕ್ಯ ಘೋಷಿಸಿದವರು ಸ್ವಾಮಿ ವಿವೇಕಾನಂದರು. ಸ್ವಾಮಿ ವಿವೇಕಾನಂದರ ಜೀವನ ಸ್ವಂತ ಮೋಕ್ಷ ಮತ್ತು ಜಗತ್ತಿನ ಹಿತ – ಈ ಎರಡೂ ಉದ್ದೇಶಗಳಿಂದ ಕೂಡಿತ್ತು. ಸ್ವಾಮೀಜಿಯವರ ಜೀವನಚರಿತ್ರೆ ಮತ್ತು ಅವರ ಹಾದಿಯಲ್ಲೇ ನಡೆದ ರಾಮಕೃಷ್ಣ ಮಹಾಸಂಘದ ಸಾಧುಸಂತರ ಸಹವಾಸದಿಂದ ನನ್ನಲ್ಲಿಯೂ ಆ ಬಗೆಯ ಸ್ಫೂರ್ತಿ ಮೂಡಿತು. ನನಗೆ ಬಾಲ್ಯದಿಂದಲೂ ಆಶ್ರಮದ ನಂಟು ಬೆಳೆದು ಬಂದಿದೆ. ಪರಮಪೂಜ್ಯ ಸ್ವಾಮಿ ರಂಗನಾಥಾನಂದರನ್ನು ನಾನು ಭೇಟಿ ಆದಾಗಲೆಲ್ಲ ಅವರು ಹೇಳುತ್ತಿದ್ದ ಮಾತೆಂದರೆ, 'Do service' (ಸೇವೆ ಮಾಡು). ಇದರಿಂದ ಉತ್ತೇಜಿತಳಾಗಿ ಅಳಿಲು ಸೇವೆ ಸಲ್ಲಿಸುವ ಕಾಯಕ ಮಾಡಿ ತೃಪ್ತಳಾಗಿದ್ದೇನೆ. ನನಗೆ ಅರಿವಿದ್ದ ಹಿಂದಿ ಭಾಷೆಯನ್ನು, ಆಸಕ್ತಿಯಿಂದ ಕಲಿಯಬೇಕೆಂದು ಬಂದವರಿಗೆ ಕಲಿಸುವ ಅವಕಾಶ ದೊರಕಿತು. ಸುಮಾರು ೩೫ ವರ್ಷಗಳ ಕಾಲ, ಸಾವಿರಾರು ವಿದ್ಯಾರ್ಥಿಗಳಿಗೆ ಕಲಿಸುವ ಸುಯೋಗ; ರಾಷ್ಟ್ರಭಾಷೆಯ ಪ್ರಚಾರದಿಂದ ಅಲ್ಪಸ್ವಲ್ಪವಾದರೂ ರಾಷ್ಟ್ರದ ಸೇವೆ ಆಗುತ್ತದೆ ಎಂಬ ಆನಂದ. ಇದರ ಜೊತೆ ಜೊತೆಗೇ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಸೋಮನಾಥಾನಂದರ ಸಹಕಾರದಿಂದಲೂ, ಬೆಂಬಲದಿಂದಲೂ, ಮಂಡ್ಯದಲ್ಲಿ ಅಧ್ಯಾತ್ಮ ಪ್ರಚಾರ, ದಿವ್ಯತ್ರಯರ ಜೀವನ ಹಾಗೂ ಸಂದೇಶಗಳನ್ನು ಬಿತ್ತರಿಸುವುದಕ್ಕೆ ಸದವಕಾಶ ಸಿಕ್ಕಿತು. ಸುಮಾರು ೨೫ ವರ್ಷಗಳ ಕಾಲ ತಿಂಗಳಿಗೆ ಎರಡರಂತೆ ಉಪನ್ಯಾಸ ಮಾಲೆ ನಿರಂತರವಾಗಿ ನಡೆಯಿತು.

'ದೀನದೇವೋ ಭವ ದರಿದ್ರದೇವೋ ಭವ' ದ ಮಂತ್ರವೂ ಫಲಕಾರಿ ಆಯಿತು. ಶ್ರೀಮಾತೆ ಶಾರದಾದೇವಿಯವರ ಜನ್ಮಶತಮಾನೋತ್ಸವದ (೧೯೫೪) ಅಂಗವಾಗಿ ಸುಮಾರು ೩೦೦೦ ಜನರ 'ದರಿದ್ರನಾರಾಯಣ ಸೇವೆ' ಜರುಗಿತು. ೧೯೬೩ರಲ್ಲಿ ಸ್ವಾಮಿ ವಿವೇಕಾನಂದರ ಜನ್ಮಶತಮಾನೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಒಂದು ವರ್ಷ ಕಾಲ ಮಂಡ್ಯದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ದಿವ್ಯತ್ರಯರ ಜೀವನ ಸಂದೇಶಗಳನ್ನು ಸಾರುವ ಕಾರ್ಯಕ್ರಮವೂ ಯಶಸ್ವಿ ಆಯಿತು. ಅಂದು ಪ್ರಾರಂಭಿಸಿದ ಇನ್ನೊಂದು ವಿಶೇಷ ಕಾರ್ಯಕ್ರಮವೆಂದರೆ, ಜೈಲಿನಲ್ಲಿ ಕೈದಿಗಳೊಡನೆ ಸೇರಿ ನಡೆಸುವ ಭಜನಾ ಕಾರ್ಯಕ್ರಮ. ತಿಂಗಳಿಗೆ ಒಂದು ದಿನ ಒಂದು ಗಂಟೆ ಕಾಲ ಪ್ರಸಾದ ವಿನಿಯೋಗದೊಂದಿಗೆ ಸುಮಾರು ೨೫ ವರ್ಷಗಳ ಕಾಲ ಈ ಕಾರ್ಯಕ್ರಮ ನಡೆದಿದೆ; ಸ್ವಾಮೀಜಿಯವರ ಧ್ಯೇಯಗಳಿಂದ ಸ್ಫೂರ್ತಿಗೊಂಡ ಮಂಡ್ಯದ ಜನತೆಯ ಪೂರ್ಣ ಸಹಕಾರದಿಂದ, ನಾನು ನೆಪಮಾತ್ರವಾಗಿ ನಿಂತು ನಡೆಸಿದಂತಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ಏನಾದರೂ ಸೇವೆ ಸಲ್ಲಿಸಬೇಕೆಂಬ ಹಂಬಲವಿತ್ತು. ಗೃಹಕೃತ್ಯದ ಜವಾಬ್ದಾರಿಗಳು ಕಳೆದ ಮೇಲೆ ಆ ಆಸಕ್ತಿ ಹೆಚ್ಚಾಯಿತು. ೬೫ ವಯಸ್ಸಿನಲ್ಲಿ ಅದಕ್ಕೆ ಒಂದು ವೇದಿಕೆ ಸಿಕ್ಕಿತು. 'ಚೇತನ ಟ್ರಸ್ಟ್' ( ಒಂದು ಬುದ್ಧಿಮಾಂದ್ಯರ ಪುನರುತ್ಥಾನ ಕೇಂದ್ರ; ಧಾರ್ಮಿಕ ಸೇವಾ ಸಂಸ್ಥೆ) ಎಂಬ ಸಂಸ್ಥೆ ಇದೆ. ಉತ್ಸಾಹಿ ಯುವ ವೈದ್ಯರು (ಮಾನಸಿಕ ರೋಗತಜ್ಞರು) ಇದರ ಸ್ಥಾಪಕರು. ಇದರ ಮೂಲಕ ಬುದ್ಧಿಮಾಂದ್ಯರಿಗೆ ಚಿಕಿತ್ಸೆ, ತರಬೇತಿಯ ಜೊತೆಗೆ ಹತ್ತಿರದ ಹಳ್ಳಿಗಳಲ್ಲಿ ಉಚಿತ ವೈದ್ಯಕೀಯ ಶಿಬಿರವನ್ನು ನಡೆಸಿ, ಔಷಧ ವಿತರಣೆ ಮಾಡುವ ಕಾರ್ಯಕ್ರಮವೂ ನಡೆಯುತ್ತಿದೆ. ಜನಸೇವೆಯೇ ಜನಾರ್ದನ ಸೇವೆಯೆಂಬ ಭಾವನೆಯೊಂದಿಗೆ ವೈದ್ಯರುಗಳ ಜೊತೆ ನನ್ನ ಕೈಲಾದ, ನನ್ನ ಅರ್ಹತೆಗೆ ತಕ್ಕ ಕೆಲಸಗಳನ್ನು ಮಾಡಿಕೊಡುತ್ತಿದ್ದೆ.

ಸ್ವಾಮಿ ವಿವೇಕಾನಂದರ ಮಹಾ ಸಮಾಧಿಯ ಶತಮಾನೋತ್ಸವದ (೨೦೦೨) ಸಂಬಂಧದಲ್ಲಿ ಮೈಸೂರು ಶ್ರೀರಾಮಕೃಷ್ಣ ಆಶ್ರಮವು 'ಏಳಿ, ಎದ್ದೇಳಿ!' ಎಂಬ ಹೆಸರಿನ ಸ್ವಾಮೀಜಿಯವರ ಚಿತ್ರ ಪ್ರದರ್ಶನ ಹಾಗೂ ಅವರ ಜೀವನದ ಸಂದೇಶವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸಾರುವ ಕಾರ್ಯಕ್ರಮ ಹಮ್ಮಿಕೊಂಡಿತು. ಸುಮಾರು ೧೪ ಹಳ್ಳಿಗಳ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಿಕೊಡುವ ಜವಾಬ್ದಾರಿಯನ್ನು ಚೇತನ ಟ್ರಸ್ಟ್‌ನವರು ನನಗೆ ವಹಿಸಿದರು. ಶಾಲಾ ಉಪಾಧ್ಯಾಯರುಗಳ ಸಹಕಾರದಿಂದ, ಯಶಸ್ವಿಯಾಗಿ ಕಾರ್ಯಕ್ರಮ ನಡೆದು, ಸಾವಿರಾರು ವಿದ್ಯಾರ್ಥಿನಿಯರಿಗೆ ಸ್ವಾಮೀಜಿಯವರ ಸಂದೇಶ ತಲುಪುವುದಕ್ಕೆ ಒದಗಿ ಬಂದ ಸದಾವಕಾಶ ನನ್ನದಾಯಿತು. ಅದರಂತೆಯೇ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಸಂಚಾರಿ ಪ್ರಚಾರಾಂದೋಲನವಾದ ಜ್ಞಾನವಾಹಿನಿ ಕಾರ್ಯಕ್ರಮದಲ್ಲೂ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿತು.

ಈ ಎಲ್ಲ ಕಾರ್ಯಚಟುವಟಿಕೆಗಳ ಮೂಲಕ ನನ್ನ ಮನಸ್ಸಿನ ಹಂಬಲ ಪೂರೈಸಿ, ಆತ್ಮ ಸಂತೋಷವಾಗಿದೆ. ಈ ರೀತಿಯ ಮನೋಭಾವನೆ ಬೆಳೆದು ಬಂದದ್ದು, ಮೊದಲೇ ತಿಳಿಸಿರುವಂತೆ ಸ್ವಾಮೀಜಿಯವರ ಧ್ಯೇಯ, ಅನುಷ್ಠಾನ ವೇದಾಂತದ ಉಪದೇಶ ಹಾಗೂ ಆಶ್ರಮದ ಸಾಧುಸಂತರ ಸತ್ಸಂಗ.

**– ಸಿ. ಎಸ್. ಮಂಗಳಮ್ಮ, ಮೈಸೂರು**



**ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯ ಅಂಗವಾಗಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮವು ೨೦೧೨ರ, ಏಪ್ರಿಲ್ ೨೦ರಿಂದ ೨೪ರವರೆಗೆ 'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ' ಎಂಬ ಸಾಧುಗಳು ಮತ್ತು ಭಕ್ತರ ಬೃಹತ್ ಸಮಾವೇಶವನ್ನು ಏರ್ಪಡಿಸಿತ್ತು. ಅದರ ಉದ್ಘಾಟನಾ ಸಮಾರಂಭದಲ್ಲಿ ಪೂಜ್ಯ ಶ್ರೀಗಳು ಮಾಡಿದ ಆಶೀರ್ವಚನವನ್ನು ಇಲ್ಲಿ ಪ್ರಕಟಿಸಲು ಹರ್ಷಿಸುತ್ತೇವೆ. ಈ ಅಮೂಲ್ಯ ಭಾಷಣದಲ್ಲಿ ಭಾರತೀಯ ಸಂಸ್ಕೃತಿಯ ಸಮಗ್ರ ಪಕ್ಷಿನೋಟವನ್ನು ಸ್ವಾಮೀಜಿಯವರು ನೀಡಿರುವುದಲ್ಲದೆ, ಅದರ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಎಸಗಿದ ಧೀರೋದಾತ್ತ ಕಾರ್ಯ ಮತ್ತು ನೀಡಿದ ಸಿಂಹಸದೃಶ ಸಂದೇಶಗಳನ್ನು ಹೃದಯಂಗಮವಾಗಿ ಬಿಂಬಿಸಿದ್ದಾರೆ. ಪೂಜ್ಯ ಶ್ರೀಗಳ ನೇತೃತ್ವದಲ್ಲಿ ಸುತ್ತೂರು ಮಠವು ಹಲವಾರು ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳನ್ನು ನಡೆಸುತ್ತಲಿದೆ; ಆ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ದೊರೆಯುತ್ತಿದೆ. ಹಾಗೆಯೇ ಮಠವು ಧಾರ್ಮಿಕ ಜಾಗೃತಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಮತ್ತು ಬಹು ಉತ್ತಮ ಪುಸ್ತಕ ಪ್ರಕಟಣ ವಿಭಾಗವನ್ನೂ ನಡೆಸುತ್ತಿದೆ.**

**ಸ್ವಾ**ಮಿ ವಿವೇಕಾನಂದರು ಭೇಟಿ ನೀಡಿದ್ದ ಈ ಉದ್ಯಾನ ನಗರದಲ್ಲಿ ಇಂಥದೊಂದು ಬೃಹತ್ ಆಧ್ಯಾತ್ಮಿಕ ಸಮ್ಮಿಲನ ಜರುಗುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಅದರಲ್ಲೂ, ಸ್ವಾಮೀಜಿಯವರ ೧೫೦ನೆಯ ಜಯಂತಿ ಮಹೋತ್ಸವದ ಅಂಗವಾಗಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಈ ವಿಶೇಷ ಕಾರ್ಯಕ್ರಮವನ್ನು ರೂಪಿಸಿರುವುದು ಇನ್ನಷ್ಟು ಅರ್ಥಪೂರ್ಣ ವಾಗಿದೆ.

ನಾಲ್ಕು ದಿನಗಳ ಅವಧಿಯ ಈ ಸಮ್ಮಿಲನದ ಗೋಷ್ಠಿಗಳಲ್ಲಿ ಹಲವಾರು ಜನ ಪ್ರಾಜ್ಞರು ಅನೇಕ ಆಧ್ಯಾತ್ಮಿಕ ವಿಚಾರಗಳನ್ನು ಪ್ರಸ್ತುತಪಡಿಸಲಿದ್ದಾರೆ; ಅವರ ಅಭಿಪ್ರಾಯಗಳು ಸಾಕಷ್ಟು ವಿಮರ್ಶೆಗೆ ಒಳಗಾಗಲಿವೆ. ಅರಿವಿನ ಕಿಟಕಿ ತೆರೆದಾಗ ತಾನೆ, ಉಸಿರೆಳೆವ ಗಾಳಿ ಒಳಸುಳಿಯಬಲ್ಲದು?

ಇಲ್ಲಿ ಚರ್ಚಿಸಲಿರುವ ವಿಷಯಗಳ ವ್ಯಾಪ್ತಿ ಅಪಾರವಾಗಿದೆ: ಸನಾತನ ಧರ್ಮದ ಪುನರುಜ್ಜೀವನ, ಪ್ರಸ್ತುತ ಪರಿಸ್ಥಿತಿಯಲ್ಲಿ ಅಧ್ಯಾತ್ಮದ ಅಗತ್ಯತೆ, ಸನಾತನ ಧರ್ಮದ ರಕ್ಷಣೆ, ಹಿಂದೂಧರ್ಮದ ಭವಿಷ್ಯ ನೋಟ, ಧರ್ಮಗ್ರಂಥಗಳ ಅಧ್ಯಯನ, ಸಂಸ್ಕೃತಿ ಪಾಠ ಶಾಲೆಗಳ ಸ್ಥಾಪನೆ, ಆಧ್ಯಾತ್ಮಿಕ ಶಿಕ್ಷಣಕೇಂದ್ರಗಳಾಗಿ ದೇವಾಲಯ ಗಳು, ಸಮುದಾಯ ಸೇವಾಮಾಧ್ಯಮವಾಗಿ ದೇಗುಲಗಳು ಇತ್ಯಾದಿ.

# ಭಾರತೀಯ ಸಂಸ್ಕೃತಿ ಮತ್ತು ಸ್ವಾಮಿ ವಿವೇಕಾನಂದರು

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಜೊತೆಜೊತೆಗೆ, ಆಧ್ಯಾತ್ಮಿಕ ಅರಿವು ಸಂಘಟನೆಯ ಬಗ್ಗೆ ಕೂಡ ಇಲ್ಲಿ ಸಾಕಷ್ಟು ವಿಚಾರವಿನಿಮಯ ನಡೆಯಲಿದೆ. ಇಂದಿನ ವೈಜ್ಞಾನಿಕ ನೆಲೆಯಲ್ಲಿ ಧಾರ್ಮಿಕ ನಿಲುವುಗಳು ಎದುರಿಸಬೇಕಾಗಿರುವ ಸವಾಲುಗಳು, ಜನಜಾಗೃತಿ ಕುರಿತಂತೆ ಕೈಗೊಳ್ಳಬೇಕಾದ ರೀತಿನೀತಿ ವಿಧಾನಗಳು, ಸಾಮಾನ್ಯ ಜನತೆಗೆ, ಮಕ್ಕಳಿಗೆ ಹಾಗೂ ಯುವ ಜನತೆಗೆ ಆಧ್ಯಾತ್ಮಿಕ ಶಿಕ್ಷಣವನ್ನು ರೂಪಿಸಬೇಕಾದ ಆವಶ್ಯಕತೆ ಹಾಗೂ ಅದರ ರೂಪರೇಷೆ, ವೇದೋಪನಿಷತ್ತು ಹಾಗೂ ಭಗವದ್ಗೀತೆಯ ಸಾರವನ್ನು ಪರಿಣಾಮಕಾರಿಯಾಗಿ ಜನತೆಗೆ ತಲುಪಿಸುವ ವ್ಯವಸ್ಥೆ ಮುಂತಾದ ಹತ್ತಾರು ಸಂಗತಿಗಳು ಚರ್ಚಿತವಾಗಲಿವೆ. ಮುಂಬರುವ ದಿನಗಳಲ್ಲಿ ಇವು ಮಾರ್ಗದರ್ಶಕ ಸೂತ್ರಗಳಾಗಲಿವೆ.

ಹಿನ್ನೋಟದ ಈ ಸಂಭ್ರಮದಲ್ಲಿ ಮುನ್ನೋಟದ ಸಕಾಲಿಕ, ಜಾಗೃತ, ಮುನ್ನೆಚ್ಚರಿಕೆಯ ಕ್ರಮಗಳಿಂದ ಮಾತ್ರ ಇಂದಿನ ಸಮಸ್ಯೆಗಳಿಗೆ ಪರಿಹಾರ ಸಾಧ್ಯ. ನಮ್ಮ ಆಶೋತ್ತರಗಳು, ಆಶಯಗಳು ದೈನಂದಿನ ನಡವಳಿ ಪ್ರತಿಬಿಂಬಿತವಾದಾಗ ಮಾತ್ರ, ಕಂಡ ಕನಸು ನನಸಿನ ಬಣ್ಣ ತಾಳುತ್ತದೆ; ನೆನೆದ ಭಾವಕ್ಕೊಂದು ನೈಜ ಆಯಾಮ ಕೂಡಿಬರುತ್ತದೆ.

ಭಾರತ ವಿಭಿನ್ನ ಧರ್ಮಗಳ, ವಿಭಿನ್ನ ಸಂಸ್ಕೃತಿಗಳ, ವಿಭಿನ್ನ ಭಾಷೆಗಳ ನಾಡು, ವೈವಿಧ್ಯದಲ್ಲಿ ಏಕತೆಯನ್ನು ಪ್ರತಿಪಾದಿಸಿರುವ ತಾಯ್ನಾಡು. ದೀಪಗಳು ಹಲವಿದ್ದರೇನು? ಅವುಗಳು ನೀಡುವ ಬೆಳಕು ಒಂದೇ ತಾನೇ?

**'ವಸುದೈವ ಕುಟುಂಬಕಂ'** ಎಂಬುದು ಭಾರತೀಯ ಸಂಸ್ಕೃತಿಯ ಉದಾತ್ತ ಭಾವನೆ. ಶಾಂತಿ, ಅಹಿಂಸೆ, ಪ್ರೀತಿ, ಸದ್ಭಾವಗಳೇ ಇದರ ಉಚ್ಚ ಆದರ್ಶಗಳು. ಹೀಗಾಗಿ, ವಿಶ್ವ ಭೂಪಟದಲ್ಲಿ ಇಂದು ಭಾರತಕ್ಕೆ ವಿಶಿಷ್ಟ ಸ್ಥಾನ ಪ್ರಾಪ್ತವಾಗಿದೆ. ಅತ್ಯಂತ ಪ್ರಾಚೀನ ಸಂಸ್ಕೃತಿ ನಮ್ಮದು ಎಂಬ ಕಾರಣದ ಜೊತೆಜೊತೆಗೆ ನಮ್ಮ ಪ್ರತಿಭೆ, ಪರಿವರ್ತನಶೀಲತೆ, ಸಹನೆ ಹಾಗೂ ಅಹಿಂಸೆಯ ಸಿದ್ಧಾಂತಗಳೂ ಈ ಚಿಂತನೆಗೆ ಪೂರಕ ಅಂಶಗಳಾಗಿವೆ.

ಅಭೂತಪೂರ್ವ ಆಧ್ಯಾತ್ಮಿಕ ಸಮೃದ್ಧ ಪರಂಪರೆ ನಮ್ಮದು. ಈ ನೆಲದಲ್ಲಿ ಎಂಥೆಂಥ ಮಹಿಮಾನ್ವಿತರು ಜನ್ಮ ತಾಳಿದರು! ಜನಮಾನಸದಲ್ಲಿ ಎಂಥ ಪರಿವರ್ತನೆಯನ್ನು ತಂದರು! ಜ್ಞಾನ ಭಕ್ತಿಭಾವದ ಅಮೃತಧಾರೆಯನ್ನೆರೆದು ಸತ್ಕರ್ಮದ ದಾರಿಯತ್ತ ಬೆಳಕು ಚೆಲ್ಲಿದರು! ತಮ್ಮ ಅಸಾಧಾರಣ ವ್ಯಕ್ತಿತ್ವದಿಂದ ಸಾಮಾಜಿಕ ಪರಿವರ್ತನೆ ತಂದರು! ಕಲ್ಯಾಣಕಾರಿ ಸಂದೇಶಗಳಿಂದ ಸೌಹಾರ್ದ ಪೂರ್ಣ ವಾತಾವರಣ ನಿರ್ಮಿಸಿದರು! ಹೀಗೆ ನಮ್ಮ ಬಾಳಿನಲ್ಲಿ ಇವರೆಲ್ಲ ನಂದದ ದಾರಿದೀಪವಾದರು.

ಮಹಾವೀರರ 'ಬದುಕು – ಬದುಕಗೊಡು' ಸಿದ್ಧಾಂತ ಮಾನವ ಬದುಕಿನ ಅಮೂಲ್ಯ ಅಂಗವಾಯಿತು. ಜೈನ ಧರ್ಮದ ನಾಂದೀವಾಕ್ಯ **'ಅಹಿಂಸಾ ಪರಮೋ ಧರ್ಮಃ'** ಎಂಬುದು ಶಾಂತಿಯ ಅಡಿಗಲ್ಲಾಯಿತು; ಭಾರತೀಯ ಸಂಸ್ಕೃತಿಯ ಬೆನ್ನೆಲುಬು ಆಯಿತು. ಜಾಗತಿಕ ಜೀವನಶೈಲಿಯ ಮೇಲೆ ಅಗಾಧ ಪರಿಣಾಮ ಬೀರಿತು. ಅಹಿಂಸೆ ಹೇಡಿತನದ ಲಕ್ಷಣವಲ್ಲ; ಧೀರತನದ ಕುರುಹು ಎಂಬುದನ್ನು ಸಾಬೀತುಪಡಿಸಿತು.

ಬುದ್ಧ ಹೇಳಿದ್ದು ಇದನ್ನೇ: "ಒಳ್ಳೆಯದನ್ನು ಮಾಡಿರಿ; ಒಳ್ಳೆಯವರಾಗಿರಿ." ಸದಾಚಾರ, ನೈತಿಕತೆ, ಕರುಣೆ, ಸೇವಾಭಾವ ಮುಂತಾದ ದುಃಖನಿವಾರಕ ಗುಣಗಳೊಂದಿಗೆ ಬೌದ್ಧ ಧರ್ಮವು ಮಧ್ಯಮಮಾರ್ಗದತ್ತ ಒತ್ತು ಕೊಟ್ಟಿತು. ಸಾರನಾಥದಲ್ಲಿ ಭಗವಾನ್ ಬುದ್ಧ ಪಾಳಿ ಭಾಷೆಯಲ್ಲಿ ಹೀಗೆ ಹೇಳಿದ:

**ಧುಬೋ ಅಂತೆ; ಅನುಪ ಗಮ್ಮ; ಮಂಜಿಯಾ ಪಟಿಪಾದಾ**

ಅಂದರೆ, ಎರಡು ಅತಿಗಳನ್ನು ಬಿಟ್ಟು, ಮಧ್ಯಮಮಾರ್ಗವನ್ನು ಅನುಸರಿಸು. ಇದರಿಂದ ಮನದಲ್ಲಿ ಶಾಂತಿ ಉದಿಸುತ್ತದೆ; ರಾಗ ದ್ವೇಷ ಇಳಿಯುತ್ತದೆ.

ಇದು ನಮ್ಮ ಶ್ರೇಷ್ಠ ಪರಂಪರೆಯ ಒಂದು ವಿಶಿಷ್ಟ ಗುಣ. ಸಂಸ್ಕೃತದಲ್ಲೂ ಇದೇ ಅರ್ಥದ ನುಡಿಯೊಂದಿದೆ: 'ಅತಿ ಸರ್ವತ್ರ ವರ್ಜಯೇತ್' – ಅತಿಯಾದದ್ದನ್ನು ಯಾವತ್ತೂ ತ್ಯಜಿಸಬೇಕು.

ಮನುಕುಲದ ಇತಿಹಾಸವೆನ್ನುವುದು ಜ್ಞಾನಾರ್ಜನೆ, ಜೀವನ ಸಾಫಲ್ಯ, ಸತ್ಯದರ್ಶನ, ಸಹಿಷ್ಣುತೆ ಮತ್ತು ದೃಢ ಸಂಕಲ್ಪದ ಒಂದು ರೋಮಾಂಚಕ ಕತೆ. ಉಪನಿಷತ್‌ಕಾರರು, ಹಲವಾರು ಜನ ಆಚಾರ್ಯರು ಈ ಜ್ಞಾನದೀವಿಗೆಯನ್ನು ಹೊತ್ತಿಸಿದ ಮಹಾನುಭಾವರು.

ಪಂಜಾಬಿನಲ್ಲಿ ಗುರುನಾನಕರು, ಉತ್ತರ ಪ್ರದೇಶದಲ್ಲಿ ಕಬೀರ–ಸೂರದಾಸ ತುಳಸೀದಾಸರು, ರಾಜಸ್ಥಾನದಲ್ಲಿ ಮೀರಾಬಾಯಿ, ಗುಜರಾತಿನಲ್ಲಿ ನರಸಿ ಮೆಹತಾ, ಬಂಗಾಳದಲ್ಲಿ ಚೈತನ್ಯ ಮಹಾಪ್ರಭು, ಶ್ರೀರಾಮಕೃಷ್ಣ, ವಿವೇಕಾನಂದರು, ತಮಿಳುನಾಡಿನಲ್ಲಿ ತಿರುವಳ್ಳುವರ್, ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರ, ತುಕಾರಾಂ, ಏಕನಾಥ, ನಾಮದೇವ, ಕರ್ನಾಟಕದಲ್ಲಿ ಶಿವಶರಣರು, ಹರಿದಾಸರು – ಹೀಗೆ ಸಂತರು, ದಾರ್ಶನಿಕರು ಹಾಗೂ ಅನುಭಾವಿಗಳು ನೈತಿಕ ಮೌಲ್ಯಗಳ ಪ್ರಸಾರದಿಂದ ಅಂತರಂಗಶುದ್ಧಿಗೆ ಪ್ರಾಶಸ್ತ್ಯ ನೀಡಿದರು. ಸಾಸ್ಕೃತಿಕ, ಆಧ್ಯಾತ್ಮಿಕ ಪುನರುತ್ಥಾನ ಕಾರ್ಯದಲ್ಲಿ ತಮ್ಮ ಅಪಾರ ಕೊಡುಗೆಯ ಮೂಲಕ ಭಾವೀ ಪೀಳಿಗೆಗೆ ದಿಕ್ಸೂಚಿಯಾದರು.

ಈ ಎಲ್ಲ ಸಾಧುಸಂತರ ಮನದಾಳದ ಆಕಾಂಕ್ಷೆ ಎಂದರೆ, ಉತ್ತಮ ವ್ಯಕ್ತಿತ್ವ ನಿರ್ಮಾಣ ಮತ್ತು ಮಾನವಕಲ್ಯಾಣ.

ಜೀವನದ ಪರಿಪೂರ್ಣತೆ ಕುರಿತಂತೆ ಸಂತ ಕಬೀರರು ಹೀಗೆನ್ನುತ್ತಾರೆ:

**ಕಬೀರ್ ಜಬ್ ಹಮ್ ಪೈದಾ ಹುಯೆ, ಜಗ್ ಹಸೆ, ಹಮ್ ರೋಯೆ! ಐಸೀ ಕರನೀ ಕರ್ ಚಲೋ, ಹಮ್ ಹಸೆ, ಜಗ್ ರೋಯೆ!**

ಅಂದರೆ, ನಾವು ಜನ್ಮ ತಳೆದಾಗ, ಈ ಪ್ರಪಂಚ ನಕ್ಕಿತು; ನಾವು ಅತ್ತೆವು. ಸಂತಸದ ಉತ್ತಮ ಕಾರ್ಯವೆಸಗಿ ಹೋಗೋಣ. ಆಗ ನಾವು ನಗುತ್ತಿರಬೇಕು; ಈ ಜಗತ್ತು ಅಳುತ್ತಿರಬೇಕು !

ಸಾಂಸ್ಕೃತಿಕ ಚೈತನ್ಯದ ಅವಿಭಾಜ್ಯ ಅಂಗವಾದ ಮಾನವ ಸೇವೆಯನ್ನು ಕುರಿತಂತೆ ನಮ್ಮ ಧಾರ್ಮಿಕ ಸಾಹಿತ್ಯದಲ್ಲಿ ಅಸಂಖ್ಯಾತ ಉದಾಹರಣೆಗಳಿವೆ. ಅಂತಹದೊಂದು ಸುಂದರ ಕವಿತೆ ಗುರುದೇವ ರವೀಂದ್ರ ಟ್ಯಾಗೂರ್ ಅವರದು. ಅದರ ಅನುವಾದ ಹೀಗಿದೆ:

**ನಿದ್ರಿಸಿದಾಗ ನಾ ಕನಸೊಂದು ಕಂಡೆ;**
**ಜೀವನ ಸುಖಮಯ ಎಂದು ಎಚ್ಚೆತ್ತಾಗ ನಾ ತಿಳಿದುಕೊಂಡೆ;**
**ಜೀವನ ಒಂದು ಸೇವೆ ಎಂದು, ಕಾರ್ಯಶೀಲನಾದಾಗ ನಾ ಅರಿತೆ;**
**ಸೇವೆಯೊಂದರಲ್ಲೇ ಇದೆ ಆನಂದ ಎಂದು.**

ಹಿಂದಿನವರು ಬಿಟ್ಟುಹೋಗಿರುವ ಹೆಜ್ಜೆಗಳು ಅಂಥ ಅನುಭವ ಸಂಪತ್ತಿನ, ಜ್ಞಾನವೈಭವದ ಪ್ರತೀಕ. ಹನ್ನೆರಡನೆಯ ಶತಮಾನದ ವಚನಕಾರರು ಭಕ್ತಿಪ್ರತಿಪಾದನೆಗೆ ಒತ್ತುಕೊಟ್ಟಂತೆ, ಸಾಮಾಜಿಕ ಸುಧಾರಣೆಯತ್ತಲೂ ಗಮನವಿತ್ತರು.

ಯಾವುದೇ ಕ್ರಿಯೆಯಲ್ಲಿ ಭಾವಶುದ್ಧಿ ಮುಖ್ಯ. ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ, ಅದೇ ಅವನತಿಗೆ ದಾರಿ.

**ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ,**
**ಏಡಿಸಿ ಕಾಡಿತ್ತು ಶಿವನ ಡಂಗುರ.**
**ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ,**
**ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ,**
**ಬೇಡಿತ್ತನೀವ ಕೂಡಲ ಸಂಗಮದೇವಾ**

ಎನ್ನುತ್ತಾರೆ ಬಸವಣ್ಣನವರು. ಒಳಿತನೆಸಗುವಾಗ, 'ನಾನು ಮಾಡಿದೆ, ನನ್ನಿಂದಲೇ ಇದೆಲ್ಲ' ಎನ್ನುವ ಅಹಮಿಕೆ ತಲೆದೋರಿದರೆ, ಅದು ಸತ್ಕಾರ್ಯವಾಗದು. ಅಂಥ ಒಣಪ್ರತಿಷ್ಠೆಯ ಗರ್ವದಿಂದ ಮಾಡಿದ ಯಾವುದೇ ಕಾರ್ಯದಲ್ಲಿ ಆತ್ಮೀಯತೆಯಾಗಲಿ, ಅನುಕಂಪೆಯಾಗಲಿ ಜೀವಂತವಾಗಿರದು. ಅಲ್ಲಿ ಕಾಯಕ್ಲೇಶ ತುಂಬಿರುತ್ತದೆ; ವ್ಯಾಮೋಹಭಾವ ಮನೆಮಾಡಿರುತ್ತದೆ. ನಮ್ಮ ಚಿತ್ತಭಿತ್ತಿ ಎಷ್ಟೆಷ್ಟು ನಿರ್ಮಲವಾಗಿರುತ್ತದೋ, ಅಲ್ಲಿ ಮೂಡುವ ಪ್ರತಿಬಿಂಬ ಅಷ್ಟಷ್ಟು ಸ್ಫುಟವಾಗಿರುತ್ತದೆ.

**ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ**
**ಚಿತ್ತಶುದ್ಧದಲಿ ಕಾಯಕವ ಮಾಡುವಲ್ಲಿ**
**ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು**
**ಮಾರಯ್ಯಪ್ರಿಯ ಅಮಲೇಶ್ವರಲಿಂಗದ ಸೇವೆಯುಳ್ಳನ್ನಕ್ಕರ**

ಎನ್ನುತ್ತಾಳೆ ಶರಣೆ ಆಯ್ದಕ್ಕಿ ಲಕ್ಕಮ್ಮ. ವಚನಸಾಹಿತ್ಯದಲ್ಲಿ ಚಿತ್ತ ಶುದ್ಧಿಗೆ, ಕಾಯಕಕ್ಕೆ, ದಾಸೋಹಕ್ಕೆ, ದಯೆಗೆ ಸಂಬಂಧಿಸಿದಂತೆ ಇಂಥ ಪ್ರಸ್ತಾಪಗಳು ಹೇರಳವಾಗಿ ಕಂಡುಬರುತ್ತವೆ.

ತತ್ತ್ವಾಧಾರಿತ ಬದುಕನ್ನು ಆರ್ಥಿಕ ಚೌಕಟ್ಟಿನಲ್ಲಿ ಬಂಧಿಸದೆ ಪ್ರಾಮಾಣಿಕತೆಯಿಂದ ದುಡಿಯುವುದು ಅಂದಿನ ಶರಣ ಸಿದ್ಧಾಂತದ ತಿರುಳಾಗಿತ್ತು.

ಅನಾದಿಕಾಲದಿಂದ ಸತ್ಯದರ್ಶನ ಹಾಗೂ ಬದುಕಿನ ಒಳನೋಟಗಳ ಬಗ್ಗೆ ನಿರಂತರ ಅಧ್ಯಯನ, ಹುಡುಕಾಟ ಸಾಗುತ್ತಲೇ ಬಂದಿದೆ. ಶಾಂತಿ, ಸೌಹಾರ್ದಗಳಿಂದ ಮಾತ್ರ ಮಾನವ ಜನಾಂಗದ ಉನ್ನತಿ ಸಾಧ್ಯ ಎಂಬುದರ ಅರಿವಾಗಿದ್ದರೂ, ಸಮಾಜದಲ್ಲಿ ಒಂದಿಲ್ಲೊಂದು ಕಾರಣಕ್ಕಾಗಿ ತಿಕ್ಕಾಟ, ಘರ್ಷಣೆ ತಲೆ ಎತ್ತುತ್ತಲೇ ಬಂದಿದೆ. ಕಳೆದ ಶತಮಾನಗಳ ಅಂತಾರಾಷ್ಟ್ರೀಯ ಚಾರಿತ್ರಿಕ ಘಟನೆಗಳೇ ಇದಕ್ಕೆ ಸಾಕ್ಷಿ. ಕೆಲವೊಮ್ಮೆ ಅನಗತ್ಯ ಪೂರ್ವಗ್ರಹಗಳು, ಅಪನಂಬಿಕೆಗಳು ಕೂಡ ಇಂತಹ ಗೊಂದಲಗಳಿಗೆ ಎಡೆಮಾಡಿಕೊಡುತ್ತಿವೆ.

ಯಾವುದೇ ದೇಶವಾಗಲಿ, ಸಮುದಾಯವಾಗಲಿ ಒಂಟಿ ದ್ವೀಪದಂತೆ ಪ್ರತ್ಯೇಕತೆಯಿಂದ ಬದುಕಲು ಇಂದಿನ ಕಾಲದಲ್ಲಿ ಸಾಧ್ಯವಾಗುವುದಿಲ್ಲ. ಪರಸ್ಪರ ಸದ್ಭಾವನೆಯಿಂದ, ತಲಸ್ಪರ್ಶಿಯಾದ ಅರಿವಿನಿಂದ ಮಾತ್ರ ನೆಮ್ಮದಿಯನ್ನು ಸಾಧಿಸಬಹುದಾಗಿದೆ. ಸಂದೇಹದ ಬೀಜಗಳನ್ನು ಬಿತ್ತಿದಷ್ಟೂ, ಅಸಮಾಧಾನದ ಪರಿಸರ ಇನ್ನಷ್ಟು ಉಲ್ಬಣಗೊಳ್ಳುತ್ತದೆ.

ಯಾವ ಧರ್ಮ ತಾನೆ ಹಿಂಸೆಗೆ ಒತ್ತುಕೊಡುತ್ತದೆ? ಕಾರುಣ್ಯದ ಸೆಲೆಯನ್ನು ಬತ್ತಿಸುತ್ತದೆ? ಎಲ್ಲ ಧರ್ಮಗಳ ಪರಮೋಚ್ಚ ಗುರಿ ಎಂದರೆ ಶಾಂತಿಯುತ ಬಾಳ್ವೆ ಹಾಗೂ ಪ್ರೀತಿ ವಿಶ್ವಾಸದ ನೆಲೆಗಟ್ಟಿನ ಮೇಲೆ ನಿಂತ ಸಚ್ಚಾರಿತ್ರ್ಯ.

ಈ ಯಾಂತ್ರೀಕೃತ ಶತಮಾನದ ಬದುಕು ನಿನ್ನೆಯಂತಿಲ್ಲ. ಪರಿವರ್ತನೆಯ ವೇಗ ನಮ್ಮ ಕಲ್ಪನೆಯನ್ನೂ ಮೀರಿ ಪ್ರಬಲವಾಗುತ್ತಿದೆ. ಈ ಕಾಲಪ್ರವಾಹದ ಹಿಂದಿರುವ ಸತ್ಯಾಂಶವೆಂದರೆ, "ಎಂದು ರಾಷ್ಟ್ರಗಳ ನಡುವೆ ಶಾಂತಿ ಇತ್ತೋ, ಅಂದು ಜಗತ್ತು ಪ್ರಗತಿ ಸಾಧಿಸಿತು. ಎಂದು ಕದನ, ವೈಮನಸ್ಸು ತಲೆದೋರಿತೋ, ಆಗೆಲ್ಲ ಅವನತಿ ತಾಂಡವವಾಡಿತು."

ಈ ಹಿನ್ನೆಲೆಯಲ್ಲಿ ಅಸಹನೆ, ವಿರೋಧಗಳನ್ನು ಪ್ರಕಟಿಸುವ ಬದಲಾಗಿ, ಪರಸ್ಪರ ವಿಚಾರವಿನಿಮಯ, ಮತಭೇದಗಳ ನಿವಾರಣೆ ಹಾಗೂ ಇತರರ ಅಭಿಮತವನ್ನು ಗೌರವಿಸುವಿಕೆ – ಇವು ಮಾತ್ರವೇ